ಶ್ರೀರಂಗಪಟ್ಟಣ ವಿಧಾನಸಭೆ ವ್ಯಾಪ್ತಿಯ ರಸ್ತೆ ಕಾಮಗಾರಿ

65 (643) ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ. (ಶ್ರೀರಂಗಪಟ್ಟಣ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯ 1) ಟಿ.ಎಂ. ಹೊಸೂರು ರಸ್ತೆ (ಮಂಡ್ಯದಿಂದ ಮದ್ದೂರು ಗಡಿಯವರೆಗೆ), 2) ಚೀರನಹಳ್ಳಿ-ತಗ್ಗಹಳ್ಳಿ ರಸ್ತೆ, 3) ಮಂಡ್ಯದಿಂದ-ಬನ್ನೂರು ರಸ್ತೆ (ಮಾರ್ಗ ಕೊತ್ತತ್ತಿ) 4) ಬಿ.ಎನ್. ರಸ್ತೆಯಿಂದ ಇಲವಾಲದವರೆಗೆ ರಸ್ತೆ ಅಭಿವೃದ್ಧಿ ವಯಾ ಪಾಲಳು, ಬೆಳಗೊಳ (ಹಳೇ ಮದ್ರಾಸ್ ಕಣ್ಣನೂರು ರಸ್ತೆ) ರಸ್ತೆಗಳು ತೀರಾ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ದುರಸ್ತಿ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ;

ಇ) ಈ ರಸ್ತೆಗಳ ಕಾಮಗಾರಿಗಳನ್ನು ಯಾವಾಗ ಪ್ರಾರಂಭ ಮಾಡಲಾಗುವುದು ; (ವಿವರ ನೀಡುವುದು) ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು)

ಅ) ಲೋಕೋಪಯೋಗಿ ಇಲಾಖೆಯ 1) ಟಿ.ಎಂ. ಹೊಸೂರು ರಸ್ತೆ (ಮಂಡ್ಯದಿಂದ ಮದ್ದೂರು ಗಡಿಯವರೆಗೆ), 2) ಚೀರನಹಳ್ಳಿ-ತಗ್ಗಹಳ್ಳಿ ರಸ್ತೆ, 3) ಮಂಡ್ಯದಿಂದ-ಬನ್ನೂರು ರಸ್ತೆ (ಮಾರ್ಗ ಕೊತ್ತತ್ತಿ) 4) ಬಿ.ಎನ್. ರಸ್ತೆಯಿಂದ ಇಲವಾಲದವರೆಗೆ ರಸ್ತೆ ಅಭಿವೃದ್ಧಿ ವಯಾ ಪಾಲಳು, ಬೆಳಗೊಳ (ಹಳೇ ಮದ್ರಾಸ್ ಕಣ್ಣನೂರು ರಸ್ತೆ) ರಸ್ತೆಗಳ ಕೆಲವು ಭಾಗಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಇ) ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಪಶ್ನೆ ಸಂಖ್ಯೆ: 643 ಕ್ಕೆ ಅನುಬಂಧ

ಕ್ರಮ ಸಂಖ್ಯೆ	ರಸ್ತೆಯ ಹೆಸರು	ರಸ್ತೆಯ ದರ್ಜೆ	ತಾಲ್ಲೂಕು	ರಸ್ತೆಯ ಒಟ್ಟು ಉದ್ದ	ರಸ್ತೆಯ ಮೇಲ್ಮೈವಿಸ್ತರ	ಪ.ಸ.ಯೋ	2009.10ನೇ ಸಾಲಿನಲ್ಲಿ ನಿರ್ವಹಿಸಲಾದ ಕಾಮಗಾರಿಯ ವಿವರ	2010.11ನೇ ಸಾಲಿನಲ್ಲಿ ನಿರ್ವಹಿಸಬೇಕಾದ ಕಾಮಗಾರಿಗಳ ವಿವರ	ಕಾಮಗಾರಿಯು ಮಂಜೂರಾಗಿ ಪ್ರಾರಂಭವಾಗುವುದು
1	ಬೆಂಗಳೂರು-ಮೀರಂಗಿರಿ ರಸ್ತೆಯ 119.10 ಕಿಮೀನಿಂದ ಪ ಎಂ ಹೊಸಕೋಟೆ ಮಾರ್ಗ ಕೊಡಿಯಾಲಂಕೆ, ಪೇರುವ ರಸ್ತೆ	ಜಿಲ್ಲಾ ಮುಖ್ಯ ರಸ್ತೆ	ಹೊರಂಗ ಮಟ್ಟಾ	11.50 ಕಿಮೀ	0.00 ರಿಂದ 7.50 ಕಿ ಮೀ ವರೆಗೆ ಡಾಂಬರ್ ಮೇಲ್ಮೈ 7.50 ರಿಂದ 4.00 ಕಿ ಮೀ ಜಲ್ಲಿ ಮೇಲ್ಮೈ	4368	ಲೆಕ್ಕ ಶೀರ್ಷಿಕೆ 3054 ಯೋಜನೆಯಡಿ 4.00 ಲಕ್ಷಗಳಷ್ಟು ರಸ್ತೆ ಗುಂಡಿ ಮುಚ್ಚಲಾಗಿದೆ	ಲೆಕ್ಕ ಶೀರ್ಷಿಕೆ 3054 ಯೋಜನೆಯಡಿ ರೂ 3.00ಲಕ್ಷಗಳಷ್ಟು ವೆಚ್ಚದಲ್ಲಿ ನಿರ್ವಹಣೆಯನ್ನು ಕೈಗೊಳ್ಳಲಾಗುವುದು ಕಾಮಗಾರಿ.166ರಡಿ ವೆಚ್ಚ ಅಧಿಕವಿದ್ದಿಗೆ ರೂ 85.00 ಲಕ್ಷಗಳ ಅಂದಾಜು ವೆಚ್ಚದ.	ಕಾಮಗಾರಿ.166ರಡಿ ರೂ 85.00 ಲಕ್ಷಗಳ ಅಂದಾಜು ವೆಚ್ಚದ ಕಾಮಗಾರಿಗಳ ಆಯವ್ಯಯಕ್ಕೆ ಮಂಜೂರಾತಿ ದೊರೆತ ನಂತರ ಟೆಂಡರ್ ಆಹ್ವಾನಿಸಿ ಕಾಮಗಾರಿ ಕೈಗೊಳ್ಳಲಾಗುವುದು.
2	ಮುಂಡಗೋಡಿಂದ ಬೀರವಳ್ಳಿ-ಕಗ್ಗಳ್ಳಿ-ಹಂಪಾಪುರ ಮಾರ್ಗ ಮೈಸೂರು ಗಡಿವರೆಗಿನ ರಸ್ತೆ	ಪ.ಮು. ರಸ್ತೆ	ಮುಂಡ್ಗ	9.50 ಕಿಮೀ	0.00 ರಿಂದ 2.00 ಕಿಮೀವರೆಗೆ ಡಾಂಬರ್ ಮೇಲ್ಮೈ 2.00 ರಿಂದ 9.50ಕಿಮೀವರೆಗೆ ಜಲ್ಲಿ ಮೇಲ್ಮೈ	3742	ಇರ್ದಾ	ಲೆಕ್ಕ ಶೀರ್ಷಿಕೆ ಮದಗಾರಸ್ಥಿ ವಿಶೇಷ ಯೋಜನೆಯಡಿ ರೂ 30.00ಲಕ್ಷ ಅನುದಾನ ನೀಡಿದ್ದು ಕಾಮಗಾರಿ ಪ್ರಗತಿಯಲ್ಲಿದೆ. ಲೆಕ್ಕ ಶೀರ್ಷಿಕೆ 5054-ಇ.ಸಿ.ಆದಿ ರೂ 42.00 ಲಕ್ಷ ಮಂಜೂರಾಗಿದ್ದು ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ.	ಕಾಮಗಾರಿಗಳನ್ನು ಮಾರ್ಚ್ 2011ರ ಅಂತ್ಯಕ್ಕೆ, ಪೂರ್ಣಗೊಳಿಸಲಾಗುವುದು.
3	ಮುಂಡಗೋಡು-ಕುಮ್ಮೂರು ರಸ್ತೆ ಮಾರ್ಗ ಬೀರವಳ್ಳಿ ಕೊತ್ತಿ ರಸ್ತೆ	ಪ.ಮು. ರಸ್ತೆ	ಮುಂಡ್ಗ	16.00 ಕಿಮೀ	0 ರಿಂದ 3.00 ಕಿಮೀ ಡಾಂಬರ್ ಮೇಲ್ಮೈ 3.00 ರಿಂದ 6.00 ಕಿಮೀ ಜಲ್ಲಿ ಮೇಲ್ಮೈ 6.00 ರಿಂದ 16.00 ಕಿಮೀ ಡಾಂಬರ್ ಮೇಲ್ಮೈ	14368	ರೂ.49.00 ಲಕ್ಷ ಹಂಚಿಕೆಯಡಿಯಲ್ಲಿ ಯೋಜನೆಯಡಿ ಸಿ10.00 ರಿಂದ 3.00 ಕಿಮೀ 5.00 ರಿಂದ 16.00 ಕಿಮೀವರೆಗೆ ಗುಂಡಿ ಮುಚ್ಚಲಾಗಿದೆ. 3.00 ರಿಂದ 5.00 ಕಿಮೀವರೆಗೆ ಒಂದು ಪದರ ಜಲ್ಲಿ ಮಾಡಿದೆ.	ಲಭ್ಯವಿರುವ ಅನುದಾನದಲ್ಲಿ ಆದ್ಯತೆ ಮೇರೆ ಕೆಲಸ ಕೈಗೊಳ್ಳಲಾಗುವುದು.
4	ಪಿ.ಎಂ.ರಸ್ತೆಯಿಂದ ಇಟಗಾಲದ ವರೆಗಿನ ರಸ್ತೆಯ ಅಭಿವೃದ್ಧಿ ದಯಾ ಕಾಲೂಕ್ಕೆ. ಬೆಳಗೊಳಜಾಕ ಮಾರ್ಗದ ಕಣಾಪುರ ರಸ್ತೆ	ಪ.ಮು. ರಸ್ತೆ	ಶಿರಂಗ ಮಟ್ಟಾ	17.50 ಕಿ ಮೀ	ಸ.127.50 ಕಿಮೀ ನಿಂದ 140.00 ಕಿಮೀ ವರೆಗೆ 7.50 ಮೀಟರ್ ಡಾಂಬರ್ ಮೇಲ್ಮೈ 140.00 ರಿಂದ 145.00 ಕಿಮೀ ವರೆಗೆ 5.50 ಮೀಟರ್ ಡಾಂಬರ್ ಮೇಲ್ಮೈ	14572	ರೂ.ಗಳು 8.00 ಲಕ್ಷಗಳಷ್ಟು ಗುಂಡಿ ಮುಚ್ಚಿ ರಸ್ತೆ ನಿರ್ವಹಣೆ ಮಾಡಲಾಗಿರುತ್ತದೆ.	ಲಭ್ಯವಿರುವ ರಸ್ತೆಯ ನಿರ್ವಹಣೆಗಾಗಿ ಮುಂಗಾರು ಪೂರ್ವ ರೂ 6.00 ಲಕ್ಷ ಮುಂಗಾರು ನಂತರ ರೂ 55.00 ಲಕ್ಷಗಳಷ್ಟು ರಸ್ತೆ ನಿರ್ವಹಣೆ ಕಾಗೂ ಅಭಿವೃದ್ಧಿಗಾಗಿ ಮೀಸಲು ಕಾಮಗಾರಿ ಕೈಗೊಳ್ಳಲಾಗುತ್ತದೆ	ನಿರ್ವಹಣೆ ಕಾಮಗಾರಿಗಳು ಪ್ರಗತಿಯಲ್ಲಿದ್ದು 2011ರ ಮಾರ್ಚ್ 15ರೊಳಗೆ ಪೂರ್ಣಗೊಳಿಸಲಾಗುವುದು ಪದರ ರಸ್ತೆಯ ಪಮುಗ್ರ ಅಭಿವೃದ್ಧಿಗೆ ರೂ 18.70 ಕೋಟಿಗಳಿಗೆ ಪ್ರಸ್ತಾವನೆಯು ಕಳುಹಿಸಲಾಗಿದೆ

ಶ್ರೀ ರಮೇಶ್ ಬಂಡಿಸಿದ್ದೇಗೌಡ ಎ.ಬಿ.: ಮಾನ್ಯ ಅಧ್ಯಕ್ಷರೆ, ನಾನು 4 ರಸ್ತೆಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದೇನೆ. ಜೊತೆಗೆ ಈ ಪ್ರಶ್ನಾವಳಿಯಲ್ಲಿ ಒಂದು ಸಮಸ್ಯೆಯನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಶ್ರೀರಂಗಪಟ್ಟಣದ ಟೌನ್ ವ್ಯಾಪ್ತಿಯಲ್ಲಿ ಬರುವ ರಾಮಪುರ ರಸ್ತೆಯಲ್ಲಿ ಪೊಲೀಸಿನವರೇ ಅಡ್ಡ ಹಾಕಿ ರಸ್ತೆ ತಡೆಯನ್ನು ಮಾಡಿದ್ದಾರೆ. ಇದು ಸರ್ಕಾರದ ಗಮನದಲ್ಲಿದೆ ಎಂದು ತಿಳಿದಿದ್ದೇನೆ. ದಸರಾ ಸಮಯದಲ್ಲಿ ಏನು ರಸ್ತೆಯನ್ನು ಮಾಡುವುದಕ್ಕೆ ಹೋಗಿ ಅರ್ಧಕ್ಕೆ ನಿಂತಿದೆ. ಇವತ್ತು ಆ ರಸ್ತೆಯಲ್ಲಿ ವಾಸ ಮಾಡುವ ಪೊಲೀಸಿನವರೇ ರಸ್ತೆ ತಡೆಯನ್ನು ಮಾಡಿ "ಶ್ರೀರಂಗಪಟ್ಟಣ ರಸ್ತೆ ಬಂದ್ ಮಾಡಿದ ಪೊಲೀಸರು" ಎಂದು ಹೇಳಿ ದೊಡ್ಡ ಹೆಡ್‌ಲೈನ್‌ನಲ್ಲಿ ಇವತ್ತು ಪ್ರಕಟವಾಗಿದೆ. ಅದನ್ನು ಮೊದಲನೆಯದಾಗಿ ಸನ್ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಬೆಂಗಳೂರು-ನೀಲಗಿರಿ ರಸ್ತೆ ಉದ್ದ ಸುಮಾರು ಹನ್ನೊಂದೂವರೆ ಕಿ.ಮೀ. ಇದೆ, ಇದರ ಗುಂಡಿ ಮುಚ್ಚುವುದಕ್ಕೆಂದು 3 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಹನ್ನೊಂದೂವರೆ ಕಿ.ಮೀ. ಉದ್ದ ರಸ್ತೆಯ ಗುಂಡಿಯನ್ನು 3 ಲಕ್ಷ ರೂಪಾಯಿಗಳಲ್ಲಿ ಮುಚ್ಚಲಾಗುತ್ತದೆಯೇ ಎಂದು ಕೇಳುತ್ತೇನೆ. ಮಂಡ್ಯದಿಂದ ಚೀರನಹಳ್ಳಿ-ತಗ್ಗಹಳ್ಳಿಗೆ ಹೋಗುವ ಏನು ಒಂಭತ್ತೂವರೆ ಕಿ.ಮೀ. ರಸ್ತೆ ಇದೆ. ಪೂರ್ಣ surface ಮಣ್ಣಿನಿಂದ ಕೂಡಿದ್ದಾಗಿದೆ. ಮಧ್ಯದಲ್ಲಿ ಸುಮಾರು 7-8 ಗ್ರಾಮಗಳನ್ನು ಹಾದುಹೋಗುತ್ತದೆ. ದೊಡ್ಡ ಗ್ರಾಮಗಳಾಗಿವೆ. ಸುಮಾರು ಒಂದು ಒಂದೂವರೆ ಕಾಲು ಕಿ.ಮೀ ಒಂದು ಗ್ರಾಮದ ರಸ್ತೆಯ ಪರಿಮಿತಿಯಲ್ಲಿ ವಾಹನಗಳು ಹೋಗಬೇಕು. ಅಲ್ಲಿ ಹಾಕಿರುವ ಜಲ್ಲಿ ಕಲ್ಲುಗಳು ಎದ್ದು ಅಕ್ಕಪಕ್ಕ ಮನೆಗಳಲ್ಲಿ ಧೂಳು, ಆ ಕಲ್ಲುಗಳು ಎದ್ದು ವಾಹನಗಳು ಓಡಾಡುವಾಗ ಹೊಡೆಯುತ್ತವೆ, ವಾಸ ಮಾಡುವುದಕ್ಕಾಗದಿರುವ ಒಂದು ಪರಿಸ್ಥಿತಿಯನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ಮಂಡ್ಯ-ಬನ್ನೂರು ರಸ್ತೆ, ನಿಜವಾಗಲೂ ಇದು ಎಂಡಿಆರ್, ರಾಜ್ಯ ಹೆದ್ದಾರಿಗಿಂತ ಹೆಚ್ಚು ಜನರು

ಓಡಾಡುವಂಥ ರಸ್ತೆ, ಇದು ಎಷ್ಟು ಕುಲಗೆಟ್ಟು ಹೋಗಿದೆ ಎಂದರೆ, ನಾವು ಬೇರೆ ರಸ್ತೆಯಲ್ಲಿ ಬರಬೇಕಾದಂಥ ಪರಿಸ್ಥಿತಿ ಇದೆ. ಕೊನೆಯದು, ಬಿ.ಎಂ. ರಸ್ತೆಯಿಂದ ಇಲವಾಲದ ಮೂಲಕ ಮಡಿಕೇರಿಗೆ ಹೋಗುವ ರಸ್ತೆಯಲ್ಲಿ ತಾವೇ ದಿನನಿತ್ಯ ಪ್ರವಾಸ ಮಾಡುತ್ತೀರಿ. ಆ ರಸ್ತೆಯ ಸ್ಥಿತಿ ಹೇಗಿದೆ ಎಂಬುದನ್ನು ತಾವೇ ಅನುಭವಿಸಿದ್ದೀರಿ. ತಾವೇ ಸ್ಪಷ್ಟ ಸೂಚನೆಯನ್ನು ಚೀಫ್ ಇಂಜಿನಿಯರ್ ಅವರಿಗೆ ಹೇಳಿದ್ದೀರಿ. ಆದರೂ ಇದುವರೆವಿಗೂ ಅಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವುದಕ್ಕೆ 6–7 ಲಕ್ಷ ಕೊಡುತ್ತೇವೆಂದು ಮಂತ್ರಿಗಳು ಹೇಳುತ್ತಾರೆ. ಅದರ ಉದ್ದ ಹದಿನೇಳೂವರೆ ಕಿ.ಮೀ. ಇದೆ. ನಿಜವಾಗಲೂ ಎಷ್ಟು ಪ್ರಮಾಣದಲ್ಲಿ ರಸ್ತೆಯನ್ನು ಸರ್ವೇ ಮಾಡುತ್ತೀರಿ. ಟ್ರಾಫಿಕ್ ಸೆನ್ಸಸ್ ಮಾಡಿಸುತ್ತೀರೆಂಬುದನ್ನು ನೋಡಿ. ಮೈಸೂರಿನಿಂದ ಕೆಆರ್‌ಎಸ್‌ಗೆ ಬರಬೇಕಾದರೆ ಅದು ಪ್ರವಾಸಿ ಸ್ಥಳ, ಮೈಸೂರಿನಿಂದ ಹೋಗುವಾಗ ಡೀಸೆಲ್ ಉಳಿಸಬೇಕೆಂದು ಸರ್ಕಾರದವರೇನು ಹೇಳುತ್ತೀರಿ. ಮಂಗಳೂರು, ಮಡಿಕೇರಿಗೆ ಹೋಗುವ ವಾಹನಗಳಿಗೆಲ್ಲಾ ಮೈಸೂರಿಗೆ ಇದು ಬೈಪಾಸ್ ರೋಡ್ ಇದ್ದ ಹಾಗೆ. ಸನ್ಮಾನ್ಯ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಯಲ್ಲಿ ಸೀರೆ ಹಂಚುವ ಕಾರ್ಯಕ್ರಮದಲ್ಲಿ ಭಾಗವಹಿಸಿದಾಗ 10 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಘೋಷಣೆ ಮಾಡಿದರು. ಆದರೆ ಇದುವರೆವಿಗೂ ಒಂದು ರೂಪಾಯಿಯೂ ಕೂಡ ಬಿಡುಗಡೆಯಾಗಿಲ್ಲ. ಈ ಬಗ್ಗೆ ಸ್ಪಷ್ಟವಾದ ಭರವಸೆಯನ್ನು ಮಾನ್ಯ ಸಚಿವರು ಕೊಡಬೇಕೆಂದು ತಮ್ಮ ಮೂಲಕ ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಸದಸ್ಯರು ಹೇಳಿದಂತೆ ಪೊಲೀಸ್ ಠಾಣೆ ಎದುರುಗಡೆ ರಸ್ತೆ 1.8 ಕಿ.ಮೀ. Fort ರಸ್ತೆ, ಇದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳುವುದಕ್ಕೆ ಸೂಚನೆಯನ್ನು ಕೊಡುತ್ತೇನೆ. ವಿಧಾನಪರಿಷತ್ತಿನ ಸದಸ್ಯರೊಬ್ಬರು ಸಹಿತ ಇದನ್ನು ಪ್ರಸ್ತಾಪ ಮಾಡಿದ್ದರು. ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆಂದು ನಾನು ಹೇಳಬಯಸುತ್ತೇನೆ. ಇದರ ಜೊತೆಗೆ ಬೆಂಗಳೂರು–ನೀಲಗಿರಿ ರಸ್ತೆಯಲ್ಲಿ pack ವರ್ಕ್‌ಗೆ 3 ಲಕ್ಷ ರೂಪಾಯಿಗಳ

ವೆಚ್ಚ ಮಾಡಲಾಗುತ್ತಿದ್ದು, ಅದರಲ್ಲಿ 85 ಲಕ್ಷ ರೂಪಾಯಿಗಳಿಗೆ ನಬಾರ್ಡ್ 16ರಲ್ಲಿ ಮಂಜೂರಾತಿ ದೊರೆತಿದೆ. ಅದಕ್ಕೆ ಟೆಂಡರ್ ಕರೆದು ಶೀಘ್ರದಲ್ಲಿ ಕೆಲಸ ಪ್ರಾರಂಭ ಮಾಡುವ ವ್ಯವಸ್ಥೆಯನ್ನು ಮಾಡುತ್ತೇವೆ. ಇನ್ನು ಮಂಡ್ಯ-ಚೀರನಹಳ್ಳಿ ರಸ್ತೆಗೆ ಸಂಬಂಧಿಸಿದಂತೆ ಇವತ್ತು 30 ಲಕ್ಷ ರೂಪಾಯಿಗಳ ಕಾಮಗಾರಿ ಪ್ರಗತಿಯಲ್ಲಿದೆ. ಮತ್ತೆ 42 ಲಕ್ಷ ರೂಪಾಯಿಗಳನ್ನು 5054ನಲ್ಲಿ ಟೆಂಡರ್ ಕರೆದು ಕೆಲಸವನ್ನು ಅತೀ ಶೀಘ್ರದಲ್ಲಿ ಮಾಡಿಸಲಾಗುವುದೆಂದು ಹೇಳಬಯಸುತ್ತೇನೆ. ಮಂಡ್ಯ-ಬನ್ನೂರು ರಸ್ತೆಯಲ್ಲಿ ಸ್ವಲ್ಪ ಅನುದಾನ ಹೆಚ್ಚಿಗೆ ಬೇಕಾಗುತ್ತದೆಂಬುದು ನನ್ನ ಗಮನದಲ್ಲಿದೆ. ಅದನ್ನು ಸೂಚನೆ ಕೊಟ್ಟು ಶೀಘ್ರದಲ್ಲೇ ಅದನ್ನು ದುರಸ್ತಿ ಮಾಡುವ ಕೆಲಸವನ್ನು ಮಾಡುತ್ತೇನೆ. ತಾವು ಹೇಳಿದ ಹಾಗೆ ಬಿಎಂ ರಸ್ತೆಯಲ್ಲಿ ಇಲವಾಲ ರಸ್ತೆಯವರೆಗೆ ಅಂದಾಜು ಹದಿನೆಂಟು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳಾಗುತ್ತವೆನ್ನುವ ಅಂದಾಜು ಬರುತ್ತಿದೆ. ಅದರ ಟ್ರಾಫಿಕ್ ಸ್ಟಡಿ ಮಾಡಿಸಿ ನಾನು ಶೀಘ್ರದಲ್ಲೇ ಉತ್ತಮ ಗುಣಮಟ್ಟದ ರಸ್ತೆ ಮಾಡುವುದಕ್ಕೆ ಏನು ಮಾಡಲು ಸಾಧ್ಯವೆನ್ನುವ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುವ ಭರವಸೆಯನ್ನು ಕೊಡುತ್ತಿದ್ದೇನೆ.

ಅಧ್ಯಕ್ಷರು: ಆ ರಸ್ತೆಗೆ ಸ್ವಲ್ಪ ಗುಂಡಿಯಾದರೂ ಮುಚ್ಚಿಕೊಡಿ. ನೋಡುವುದಕ್ಕೆ ಆಗುವುದಿಲ್ಲ.

ಶ್ರೀ ಸಿ.ಎಂ. ಉದಾಸಿ: ತಾವು ಓಡಾಡುವ ರಸ್ತೆ ಎನ್ನುವುದು ನನಗೆ ಗೊತ್ತಾಗಿದೆ.

ಶ್ರೀ ಸಿ.ಎಸ್. ಪುಟ್ಟರಾಜು: ಮಾನ್ಯ ಸಭಾಧ್ಯಕ್ಷರೆ, ಯಾರು ಹೇಳುವ ಅಗತ್ಯವಿಲ್ಲ. ಆ ರಸ್ತೆಯ ಸ್ಥಿತಿಯನ್ನು ನೀವೇ ಕಣ್ಣಿಂದ ನೋಡಿದ್ದೀರಿ. ಪಾಪ! ಅಪ್ಪಚ್ಚುರಂಜನ್ ಅವರು ಆ ರಸ್ತೆಯಲ್ಲಿ ಕುಂಟಿಕೊಂಡು ಹೋಗುತ್ತಾರೆ.

ಅಧ್ಯಕ್ಷರು: ಮಾಡುತ್ತೇನೆಂದು, ಮಾನ್ಯ ಸಚಿವರು ಹೇಳಿದ್ದಾರೆ.

ಶ್ರೀ ರಮೇಶ್ ಬಂಡಿಸಿದ್ದೇಗೌಡ: ಮಾನ್ಯ ಅಧ್ಯಕ್ಷರೆ, ತಾವೇ ಆ ರಸ್ತೆಯಲ್ಲಿ ತಿರುಗಾಡುತ್ತೀರಿ. ಎಷ್ಟು horrible ಆಗಿದೆ ನೋಡಿ. ಕೆಆರ್‌ಎಸ್‌ಗೆ ಹೋಗಬೇಕಾದ ಪ್ರವಾಸಿಗರು ಬಯ್ದುಕೊಂಡು ಹೋಗುತ್ತಾರೋ ಕಲ್ಲು ಹೊಡೆದುಕೊಂಡು ಹೋಗುತ್ತಾರೋ ಎನ್ನುವ ಪರಿಸ್ಥಿತಿಯಲ್ಲಿದ್ದೀರಿ. ನೀವೇ ರಸ್ತೆ ಬದಲಾಯಿಸಿ ಈಗ ಮೈಸೂರಿನಿಂದ ಹೋಗುತ್ತಿದ್ದೀರಿ. ಅಲ್ಲಿರುವ ಪರಿಸ್ಥಿತಿಯನ್ನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಈ ಬಗ್ಗೆ ಸ್ಪಷ್ಟವಾದ ಭರವಸೆಯನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ. ಜೊತೆಗೆ ಮಂಡ್ಯದಲ್ಲಿ ಸೀರೆ ಹಂಚುವ ದೊಡ್ಡ ಕಾರ್ಯಕ್ರಮದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು 10 ಕೋಟಿ ಹಣವನ್ನು ಬಿಡುಗಡೆ ಮಾಡುತ್ತೇವೆಂದು ದೊಡ್ಡ ಸಮಾರಂಭದಲ್ಲಿ ಹೇಳಿದ್ದಾರೆ.

ಶ್ರೀ ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೆ, ಡಬಲ್ ರೋಡ್ ಮಾಡಿದರೆ ಮೈಸೂರಿಗೆ ಹೋಗುವುದು ತಪ್ಪುತ್ತದೆ. ಮೈಸೂರಿಗೆ ವೆಹಿಕಲ್‌ಗಳ ಒತ್ತಡ ಕಡಿಮೆ ಆಗುತ್ತದೆ. ದಯವಿಟ್ಟು ಅದನ್ನು ಆದಷ್ಟು ಬೇಗನೆ ಮಾಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಡಿಕೇರಿಯ ಶಾಸಕರೂ ಸಹಿತ ನನ್ನ ಗಮನಕ್ಕೆ ತಂದಿದ್ದಾರೆ. ಇದರ ಬಗ್ಗೆ ಅತಿ ಶೀಘ್ರದಲ್ಲಿಯೇ ಒಂದು DPR ಮಾಡಿಸಿ ಈ ಪ್ರಾಜೆಕ್ಟ್ ಅನ್ನು ಕಾರ್ಯಗತಗೊಳಿಸುವ ಕೆಲಸವನ್ನು ಮಾಡುತ್ತೇನೆಂದು ಹೇಳುವುದಕ್ಕೆ ಬಯಸುತ್ತೇನೆ. 18 ಕೋಟಿ 70 ಲಕ್ಷ ರೂ. ಬಂದಿದೆ ಅದು ಡಬಲ್ ರೋಡ್‌ಗಾಗಿ ಅಂದಾಜು ಇದೆ. ಅದಾದ ಮೇಲೆ ಹೇಳುತ್ತೇನೆ.

ಶ್ರೀ ಅಪ್ಪಾಜಿ ಎಸ್. ನಾಡಗೌಡ: ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಒಂದು ಸಲಹೆ ಕೊಡುತ್ತೇನೆ. ಇವತ್ತು ಒಂದು ಕಿ.ಮಿ. ರಸ್ತೆ ಮಾಡುವುದಕ್ಕೆ ಒಂದು ಕೋಟಿ ರೂ.ಗಳಿಗಿಂತ ಹೆಚ್ಚಿನ ಹಣ ಬೇಕು. ಅದು ಸರ್ಕಾರದಿಂದ ಮಾಡುವುದಕ್ಕೆ ಕಷ್ಟಕರವಾದ ಕೆಲಸ ಎನ್ನುವುದನ್ನು ನಾವೂ

ಒಪ್ಪುತ್ತೇವೆ. Build, operate, transfer ಪದ್ದತಿಯಲ್ಲಿ MDR, State Highways ಏನೇನು ಬರುತ್ತವೆ ಅವನ್ನೆಲ್ಲಾ ಮಾಡುವುದಕ್ಕೆ ನೀವು ಏಕೆ ಆಲೋಚನೆ ಮಾಡಬಾರದು? It is a best thing you can do. ನೀವು ಉಳಿತಾಯವನ್ನೂ ಮಾಡಬಹುದು. You concentrate on village roads. ಗ್ರಾಮೀಣ ರಸ್ತೆಗಳು ಮತ್ತೊಂದು ಅವುಗಳ ಮೇಲೆ concentrate ಮಾಡುವುದು ಉತ್ತಮವೆಂದು ನನಗನ್ನಿಸುತ್ತದೆ.

ಶ್ರೀ ಎ.ಬಿ. ರಮೇಶ್ ಬಂಡಿಸಿದ್ದೇಗೌಡ: ಮಾನ್ಯ ಅಧ್ಯಕ್ಷರೆ, ಅದನ್ನು 4 ಲೈನ್ ಮಾಡಬೇಕೆಂದು ಮಾಡಿದ್ದರು. ಕೊನೇ ಪಕ್ಷ 4 ಲೈನ್ ಮಾಡುವುದಕ್ಕೆ ಆಗದೇ ಇದ್ದರೂ ಕೂಡ ಈಗ ಏನು ರಸ್ತೆ ಇದೆ ಅದನ್ನು ದಯಮಾಡಿ ಉಳಿಸಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಬಂಡಿಸಿದ್ದೇಗೌಡರು ಹೇಳಿದ ಮಾತನ್ನು ಗಮನದಲ್ಲಿಟ್ಟುಕೊಂಡು ಅದನ್ನು DPR ಮಾಡಿದ ಕೂಡಲೇ ಮುಂದಿನ ಕ್ರಮ ಕೈಗೊಳ್ಳುತ್ತೇನೆ. ಈಗಾಗಲೇ ನಾವು 450 ಕಿ.ಮೀ. ರಸ್ತೆ ಕಾರ್ಯಗತಗೊಳಿಸುವ ಕೆಲಸ ಮಾಡಿದ್ದೇವೆ. 800 ಕಿ.ಮಿ. DPR ನಡೆಯುತ್ತಿದೆ. PPP ಮಾಡುವುದರಲ್ಲಿ ಇತ್ತೀಚೆಗೆ ಮಧ್ಯದಲ್ಲಿ ಸ್ಲ್ಯಾಬ್ ಆದಾಗ ಜನ ಮುಂದೆ ಬಂದಿರಲಿಲ್ಲ. ಇವತ್ತು ಮುಂದೆ ಬಂದಿದ್ದಾರೆ ಇವತ್ತು 450 ಕಿ.ಮಿ. ಈಗಾಗಲೇ ಪ್ರಾರಂಭವಾಗಿದೆ. ಎಲ್ಲಿ traffic density ಹೆಚ್ಚಿಗೆ ಇದೆ ಅದನ್ನು ಗಮನದಲ್ಲಿಟ್ಟುಕೊಂಡು ಮಾಡುವಂತಹ ಕೆಲಸ ನಾವು ಮಾಡುತ್ತಿದ್ದೇವೆ. ಸುಮಾರು 5000 ಕಿ.ಮಿ. ರಸ್ತೆ ಮಾಡುವಂತಹ ಗುರಿಯನ್ನು ಇಟ್ಟುಕೊಂಡಿದ್ದೇವೆ.

ಕಟ್ಟಡದ ಕಾಮಗಾರಿಗಳು

66 (48) ಶ್ರೀ ರಾಜು ಕೆ. (ರಾಮನಗರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?